ಶ್ರೀ ಕೆ. ಎಚ್. ಪಾಟೀಲ್.—ಇದು ಇಡೀ ರಾಜ್ಯಕ್ಕೆ ಅನ್ವಯಿಸತಕ್ಕ ಅಜ್ಞೆ.

ಶ್ರೀ ಎಂ. ಎಸ್. ಕೃಷ್ಣನ್.—ಇಲ್ಲಿ ಬ್ಯಾಂಬು ಪಲ್ಪ್ ಇಂಡಸ್ಟ್ರಿಯನ್ನು ಪ್ರಾರಂಭಮಾಡಲು ತಾತಾ ಕಂಪೆನಿಯವರು ಅಪ್ಲಿಕೇಷನ್ ಹಾಕಿಕೊಂಡಿದ್ದಾರೆಂದೂ ಆದು ಸರ್ಕಾರದವರ ಪರಿಶೀಲನೆಯಲ್ಲಿದೆಯೆಂದೂ ವರ್ತಮಾನ ಇದೆ ಇದರ ನಿಜಾಂಶವೇನು ?

ಶ್ರೀ ಕೆ. ಎಚ್. ಪಾಟೀಲ್.—ಸರ್ಕಾರದವರಲ್ಲಿ ಇದರ ಬಗ್ಗೆ ಯಾವ ಮಾಹಿತಿಯೂ ಇಲ್ಲ. ಮಾನ್ಯ ಸದಸ್ಯರೇನಾದರೂ ಮಾಹಿತಿ ಕೊಟ್ಟರೆ ಪರಿಶೀಲನೆ ಮಾಡುತ್ತಾರೆಂದು ತಿಳಿಸಲಿಕ್ಕೆ ಇಚ್ಛಿಪಡುತ್ತೇನೆ ; ಇದರ ಬಗ್ಗೆ ಸೂಕ್ತ ಕ್ರಮ ಕೂಡ ಕೈಗೊಳ್ಳಲಾಗುತ್ತದೆ.

ಶ್ರೀ ಅಬ್ದುಲ್ ಖುದ್ದೂಸ್ ಅನ್ಸಾರ್.—ತಾವು ಇಲ್ಲಿ ಬೊಂಬನ್ನು ಉಪಯೋಗಿಸುವುದಕ್ಕೆ ಆಜ್ಞೆ ಮಾಡಿದೆ ಎಂದು ಹೇಳಿದರೂ ಆಲ್ಲಿ ಸ್ಥಳೀಯ ಅಧಿಕಾರಿಗಳು ಬೊಂಬನ್ನು ಕಡಿಯಲಿಕ್ಕೆ ಅವಕಾಶ ಕೊಡುತ್ತಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಎಚ್. ಪಾಟೀಲ್ —ಸರ್ಕಾರದವರು ಯಾವಾಗಲೂ ಕೊಡುವುದಿಲ್ಲವೆಂದು ಹೇಳುತ್ತಿಲ್ಲ. ಆದರೆ ಅಲ್ಲಿ ಜನರು ತಾವೇ ಬಿದಿಕನ್ನು ಕಡಿಯುವುದಕ್ಕೆ ಪರವಾನಿಗೆ ಕೇಳಿದ್ದರಿಂದ ಅಲ್ಲಿ ಬಿದಿರು ಈಗ ತಾನೆ ಚಿಗರೊಡೆಯುತ್ತಿರುವುದರಿಂದ ಅವರಿಗೆ ಪರವಾನಿಗೆ ಕೊಟ್ಟಿಲ್ಲ. ಅದಕ್ಕೆ ಸರ್ಕಾರದವರೇ ತಂದು ಜನಕ್ಕೆ ಒದಗಿಸುತ್ತಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಯಾವ ಮರಗಳನ್ನು ಯಾವ ರೂಪದಲ್ಲಿ ಯಾವ ಕೈಗಾರಿಕೆಗಳಿಗೆ ಸರ್ಕಾರದವರು ಹೇಗೆ ಒದಗಿಸುತ್ತಾರೆ ?

ಶ್ರೀ ಕೆ. ಎಚ್. ಪಾಟೀಲ್.—ಅದಕ್ಕೆ ಉತ್ತರ ಕೊಡಬೇಕಾದರೆ ಒಟ್ಟು ೩ ಸಾವಿರ ಮರಗಳಿವೆ. ಯಾವ ಮರ, ಯಾವ ಕೈಗಾರಿಕೆಗೆ ಬರುತ್ತದೆಂಬುದನ್ನು ತಿಳಿಸುವುದಕ್ಕೆ ಕಷ್ಟವಾಗುತ್ತದೆ. ಮಾನ್ಯ ಸದಸ್ಯರು ಇಂಥ ನಿರ್ದಿಷ್ಟ ಕೈಗಾರಿಕೆಗೆ ಯಾವ ಮರ ಒದಗಿಸುತ್ತೀರಾ ಎಂದರೆ ಅದಕ್ಕೆ ಉತ್ತರ ಹೇಳಬಹುದು.

MAHAJAN COMMISSION'S REPORT

604. SRI D. B. KALMANKAR (Afzalpur).—Will the Chief Minister be pleased to state:—

(*a*) whether Government has received any communication from the Government of India regarding implementation of the Mahajan Commission's Report ;

(*b*) whether status-quo is proposed to be maintained in the respective States ?

SRI K. H. PATIL (Minister for Agriculture and Forests) (On behalf of Sri D. Devaraj Urs (Chief Minister).—

(*a*) No.

(*b*) This Government has not made any proposal.

SRI D. B. KALMANKAR.—May I know whether the Central Government has made any proposal to this Government for maintaining the status quo, Sir ?

† SRI K. H. PATIL.—I have already stated that there is no proposal received from the Centre.

SRI D. B. KALMANKAR.—May I know whether this Government has urged the Gentral Government for the implementation of the Mahajan Commission Report recently, Sir ?

SRI K. H. PATIL.—Definitely. In view of the resolution of this House, it is the duty of the State Government to request the Central Government to implement it.

SRI B. B. SAYANAK.—May I know whether it is a fact that the Chief Minister of Maharashtra and the Chief Minister of Mysore have entrusted the Maharashtra-Mysore border dispute to the Prime Minister ? This has been stated by the Union Deputy Minister for Home, in the Lok Sabha, last week.

SRI K. H. PATIL.—As I know, the matter has been entrusted to the Parliament and the Parliament is seized of the matter.

ಶ್ರೀ ಎಂ. ಎಸ್. ಕೃಷ್ಣನ್.—ತಾವೇನೋ ಇಲ್ಲಿ ಹೀಗೆ ಇಲ್ಲಿ ಉತ್ತರವನ್ನು ಕೊಡುತ್ತೀದ್ದೀರಾ. ಆದರೆ ಪತ್ರಿಕೆಗಳಲ್ಲಿ ರೈಲ್ವೆ ಲೈನ್, ಇಲ್ಲವೇ ಬಸ್ ರೋಡನ್ನು ಅನುಸರಿಸಿ ಏನೋ ಒಂದು ಗಡಿ ನಿರ್ಧಾರ ಮಾಡಬೇಕೆಂಬುದಾಗಿ ವಿಚಾರ ನಡೆಯುತಿದೆ ಎಂದು ವರದಿಗಳು ಬರುತ್ತಿವೆ. ಆದರ ಬಗ್ಗೆ ಏನು ಏನು ಹೇಳಂತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಈ ಮಾನ್ಯ ಸಭೆಯ ಸದಸ್ಯರು ಪಾಸ್ ಮಾಡಿದ ಠರಾವಕ್ಕಿಂತ ನಾನು ಪತ್ರಿಕೆಗಳ ವರದಿಗೆ ಅಷ್ಟು ಮಹತ್ವ ಕೊಡಲಾರೆ.

SRI D. B. KALMANKAR.—May I know whether it is a fact that the Chief Minister of Maharashtra is pleading with the Prime Minister that she should arbitrate in this matter ?

SRI K. H. PATIL.—I have no information about it.

OFFICIALS IN THE OFFICE OF THE REGISTRAR OF CO-OPERATIVE SOCIETIES, BANGALORE.

657. SRI M. B. RAMASWAMY (Anekal).—Will the Minister for Co-operation be pleased to state.—

(*a*) the number of officials working in the Office of the Registrar of Co-operative Societies (Head office) Bangalore since 10 years ;

(*b*) of them, how many are continuing in the same office after promotion ;

(*c*) the reasons for keeping such officers in the same office for more than ten years ;

(*d*) whether there are any allegations against such officers ?